ಅಲ್ಲಿರತಕ್ಕ ಸದಸ್ಯರುಗಳೆಲ್ಲಾ ಅವರ ಊರಿನವರೇ ಇರುತ್ತಾರೆ ; ಅವರೆಲ್ಲಾ ಅವರೇ ಶಿಫಾರಸ್ಸು ಮಾಡಿದಂತ ಜನ. ನಮ್ಮ ಊರಿನವರು ಯಾರೂ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ.—ಇಂಥ ಅಯೋಗ್ಯರು ನನ್ನ ನನ್ನ ಹಿಂದೆ ಇಲ್ಲ. ಇಂಥ ಅನ್ಯಾಯಗಳನ್ನು ಮಾಡಿದರೆ ಯಾಪ ದೇವರು ಪೋಕ್ಷ ಕೊಡುತ್ತಾನೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟೋ ಕೇಸುಗಳಲ್ಲಿ ಸಿ.ಓ.ಡಿ. ವರದಿ ಬಂದಿದ್ದು ಅದರ ಆಧಾರದ ಮೇಲೆ ಸದಸ್ಯರುಗಳನ್ನು ತೆಗೆದುಹಾಕಿದ್ದೇವೆ. ಅನ್ಯಾಯ ನಡೆದಿರುವ ಬಗ್ಗೆ ನಿರ್ದಿಷ್ಟವಾದ ವಿವರಗಳಿದ್ದರೆ ಅದನ್ನು ಕೊಡಿ. ಆ ಬಗ್ಗೆ ಸಿ.ಓ.ಡಿ. ಯಿಂದ ವರದಿ ತರಿಸಿಕೊಂಡು ಸದಸ್ಯರನ್ನು ರೀಪ್ಲೇಸ್ ಮಾಡಬೇಕಾದರೆ, ಮಾಡೋಣ. ನಿರ್ದಿಷ್ಟ ಆಪಾದನೆಗಳಿದ್ದರೆ ಕ್ರಿಮಿನಲ್ ಕೇಸ್ ಬೇಕಾದರೂ ಹಾಕಿಸೋಣ.

ಶ್ರೀ ಕೆ.ಹೆಚ್. ಹನುಮೇಗೌಡ.—ಒಬ್ಬ ಲ್ಯಾಂಡ್ ಟ್ರಿಬ್ಯುನಲ್ ಸದಸ್ಯ ಹಾಸನದ ಟೌನ್‌ಗೆ ಸೇರಿದಂತೆ ಬಹಳ ಬೆಲೆ ಬಾಳತಕ್ಕ ಭೂಮಿಯನ್ನು ಗೇಣಿದಾರರ ಹೆಸರಿನಲ್ಲಿ ತೆಗೆದುಕೊಂಡಿದ್ದಾನೆ. ನಿನಗೆ ಅರ್ಧ ಎಂದು ಹೇಳಿಕೊಂಡು ಸುಮಾರು ೧೨ ಜನರ ಹತ್ತಿರ ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಖರೀದಿ ಮಾಡಿದ್ದಾನೆ. ಇದಕ್ಕಿಂತ ಎವಿಡೆನ್ಸ್ ಯಾವುದು ಬೇಕು ಹೇಳಿ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ೬ ತಿಂಗಳ ಹಿಂದೆ ನನ್ನ ಗಮನಕ್ಕೆ ತಂದಿದ್ದರೆ. ತಕ್ಷಣ ಕ್ರಮ ತೆಗೆದುಕೊಳ್ಳುತ್ತಿದೆ. ಈಗಲೂ ಬರೆದುಕೊಡಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಅತಕೇರಿ.—ಹರಿಜನ ಗೇಣಿದಾರರಿಗೆ ಅನ್ಯಾಯವಾದಂಥ ಸಂದರ್ಭದಲ್ಲಿ ಲೀಗಲ್ ಅಡ್ವೈಸರುಗಳಿಂದ ಸಹಕಾರ ಸಿಗುತ್ತಿಲ್ಲ. ಇದರಿಂದ ಸರಿಯಾಗಿ ಕೇಸುಗಳನ್ನು ವಿಲೇವಾರಿ ಮಾಡುವುದಕ್ಕಾಗುತ್ತಿಲ್ಲ. ಭೂ ಮಾಲೀಕರು ಪ್ರಭಾವಿ ವ್ಯಕ್ತಿಗಳಾಗಿರುವುದರಿಂದ ಸ್ಥಳೀಯ ಪೋಲೀಸಿನವರು ಕೂಡ ಗೇಣಿದಾರರಿಗೆ ರಕ್ಷಣೆ ಕೊಡುವುದಿಲ್ಲ. ಭೂಮಿ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಹೈಕೋರ್ಟಿನಲ್ಲಿ ಅವನಿಗೆ ನ್ಯಾಯ ಕೂಡ ಸಿಗುವುದಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ನಿರ್ದಿಷ್ಟವಾದಂತ ಕೇಸುಗಳು ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

New Levy System in the State

342. SRI K. H. HANUME GOWDA (Hassan).—Will the Minister for Food and Civil Supplies be pleased to state—

(a) the date on which the present Levy System came into force in the State;

(b) the reasons for changing the previous Levy System;

(c) whether it has come to the notice of the Government that much inconvenience is caused to the consumers after bringing into force the new Levy System and thereby the price of rice is rising day to day;

(d) if so, the measures taken by the Government to minimise these hardships?

SRI MANIKRAO PATIL (Minister for Food and Civil Supplies) —

(a) It came into force from 1981-82 crop year.

(b) Under the previous levy system the growers levy was in force and with a view to give up growers levy and to adopt a common system as per the policy of the Government of India, the previous system was changed.

(c) There is a slight increase in the price of rice. But it cannot be said that it is due to enforcement of new levy system.

(d) To hold the price line adequate quantity of rice is being distributed by Government through Fair Price Shops.

ಶ್ರೀ ಕೆ. ಹೆಚ್. ಹನುಮೇಗೌಡ.—೧೯೮೦-೮೨ನೇ ಇಸವಿಯಲ್ಲಿ ಹೊಸ ಲೆವಿ ಪದ್ಧತಿಯನ್ನೇನು ಜಾರಿಗೆ ತಂದಿದ್ದೀರಿ ಆದರಿಂದ ರೈತರಿಗೆ ಯಾವ ರೀತಿಯ ಪ್ರಯೋಜನವಾಗಿದೆ ಮತ್ತು ಸರ್ಕಾರದ ಮೇಲೆ ಏನು ಪರಿಣಾಮವಾಗಿದೆ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ರೈತರಿಗೆ ಯಾವುದೇ ತರಹದ ಕಷ್ಟವಾಗಿಲ್ಲವೆಂದು ಸರ್ಕಾರದ ಭಾವನೆ. ಸರ್ಕಾರ ೩ ಲಕ್ಷ ಟನ್ ಭತ್ತವನ್ನು ಪ್ರೊಕ್ಯೂರ್ ಮಾಡುವ ಉದ್ದೇಶವನ್ನಿಟ್ಟುಕೊಂಡಿತ್ತು. ಅದು ಈಗ ಸಾಧ್ಯವಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಹಿಂದಿನ ಲೆವಿ ಪದ್ಧತಿ ಪ್ರಕಾರ ರೈತ ಬೆಳೆದಂತಹ ಹೆಚ್ಚುವರಿ ಭತ್ತವನ್ನು Leavy Collection Pointಗೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದ. ಉಳಿದ ಭತ್ತವನ್ನು ತಾನು ಉಪಯೋಗಿಸುವುದಕ್ಕೆ ಅಥವಾ ಬೇರೆಯವರಿಗೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಏನೂ ತೊಂದರೆ ಇರಲಿಲ್ಲ. ಈಗಿನ ಲೆವಿ ಪದ್ಧತಿ ಪ್ರಕಾರ ರೈತ ಲೆವಿ ಕೊಡುವುದರ ಜೊತೆಗೆ ತನ್ನ ಸ್ವಂತ ಉಪಯೋಗಕ್ಕೆ ಬೇಕಾದ ಅಕ್ಕಿಯನ್ನು ಮಿಲ್ ಮಾಡಿಸಬೇಕಾದರೆ ವಿಲೇಜ್ ಅಕೌಂಟೆಂಟಿನ ಬೆನ್ನು ಹತ್ತಿ ಅವನ ಅನುಮತಿ ಪಡೆದು ಮಾಡಿಸಬೇಕಾಗುತ್ತದೆ. ಇಂಥ ದುರ್ವ್ಯವಹಾರ ನಡೆಯುತ್ತಿರುವುದರಿಂದ ರೈತ ಕಣ್ಣೀರಿಡುತ್ತಿದ್ದಾನೆ. ಇವತ್ತಿನ ಲೆವಿ ಪದ್ಧತಿ ಅನ್ನ ಬೆಳೆಯುವ ರೈತನಿಗೆ ಶಾಪವಾಗಿ ಪರಿಣಮಿಸಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ?

SRI MANIKRAO PATIL.—Sir, it is not correct to say that inconvenience is caused to the formers due to the existing levy system. As a matter of fact, during the last year, the practice in the State was to collect levy from the source only. But, this year Government of India directed to introduce levy collection from the farmers at the mill-point in addition to the levy collection at source. In order to facilitate the farmers that they should not face any unnecessary inconvenience, we have switched over to this levy system. Sir, when the Government of India sends some direction, it is the duty of the State Government to formulate its policy in confirmity with the Government of India. I do not think that at any point, farmers are being faced with inconvenience.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಒಬ್ಬ ರೈತ. ನನಗೆ ೨೦ ಪಲ್ಲ ಲೆವಿ ಹಾಕುತ್ತಿದ್ದರು. ಅದನ್ನು ಒಂದು ಸಾರಿ ಕೊಟ್ಟುಬಿಡುತ್ತಿದ್ದೆ. ಆಮೇಲೆ ಒಂದು ವರ್ಷ ಇವರ ಕಾಟ ಇರಲಿಲ್ಲ. ಉಳಿದಿದ್ದನ್ನು ಮಾಡಿಕೊಂಡು ಬೇಕಾದಷ್ಟನ್ನು ಮಿಲ್ ಮಾಡಿಸಿಕೊಂಡು ನೆಮ್ಮದಿಯಾಗಿರುತ್ತಿದ್ದೆವು. ಆದರೆ, ಇವತ್ತಿನ ಪದ್ಧತಿ ಪ್ರಕಾರ ಯಾವಾಗ ರೈತ ಭತ್ತವನ್ನು ಮಿಲ್ ಮಾಡಿಸಬೇಕಾದರೂ ವಿಲೇಜ್ ಅಕೌಂಟೆಂಟಿನ ಅನುಮತಿಗಾಗಿ ಅವನನ್ನು ಹುಡುಕಿಕೊಂಡು ಅವನ ಹಿಂದುಗಡೆ ತಿರುಗಬೇಕಾಗಿ ಬಂದರೆ ರೈತರ ಗತಿ ಏನು? ಅವನು ಎಲ್ಲಿರುತ್ತಾನೆಂದು ಅವನನ್ನು ಹುಡುಕಿಕೊಂಡು ಎಲ್ಲಿ ತಿರುಗುವುದು? ಈ ಹಿಂಸೆ ನಿಮಗೇನಾದರೂ ಅರ್ಥವಾಗಿದೆಯೆ? ನೀವು ಭತ್ತ ಬೆಳೆದಿದ್ದೀರಾ? ಈ ಆರ್ಡರ್ ಕೊಟ್ಟಿ

ದ್ದೀರಲ್ಲ ಇದರ ಪರಿಣಾಮ ರೈತರ ಮೇಲೆ ಏನಾಗುತ್ತದೆಂಬುದನ್ನು ಯೋಚನೆ ಮಾಡಿದ್ದೀರಾ? ಪ್ರತಿ ಸಾರಿ ವಿಲ್ಲಿಗೆ ಹೋಗಬೇಕಾದರೂ ವಿಲೇಜ್ ಅಕೌಂಟೆಂಟನ್ನು ಹುಡುಕಿಕೊಂಡು ಹೋಗಬೇಕಲ್ಲ. ರೈತ ತನ್ನ ಮಕ್ಕಳನ್ನು ನೋಡಿಕೆ ಳ್ಳುತ್ತಾನೆಯೇ, ವ್ಯವಸಾಯ ಮಾಡುತ್ತಾನೆಯೇ, ವಿಲೇಜ್ ಅಕೌಂಟೆಂಟನ್ನು ಹುಡುಕುತ್ತಾನೆಯೇ? ಇದನ್ನು ತಾವು ಹೇಳಬೇಕು. ಕಾನೂನು ಮಾಡಬೇಕಾದರೆ ಅನ್ನ ಬೆಳೆದುಕೊಡತಕ್ಕ ರೈತನನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ಅವನ ಬದುಕಿಗೆ ನಾವು ನೀವು ಎಲ್ಲರೂ ಹೊಣೆಯಾಗಿರುತ್ತೇವೆ. ಕೆಲವು ರೈತರು ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ಯಾವಾಗ ಇವರಿಗೆ ವಿವೇಕ ಬರುತ್ತದೋ ಎಂಬ ಹುಟ್ಟಕ್ಕೆ ಬಂದಿದೆ. ದಯವಿಟ್ಟು ಈ ಬಗ್ಗೆ ಯೋಚನೆ ಮಾಡಿ.

SRI MANIKRAO PATIL.—Sir, on a number of times I have told in the House that farmees need not go to the Village Accountant. The Village Accountant will knock at the doors of the farmers.

(INTERRUPTION)

Sir, we have given clear-cut instructions to all the Deputy Commissioners that nothing should happen to the farmers whenever they take paddy for hulling for their personal consumption. Very recently, about a week back, on certain point of clarification, I have also assured on the floor of the House that the farmer need not obtain any permit at all for hulling two quintals of paddy. I fully appreciate the anxiety of the hon Member but it is something str nge for me. This is the first time the hon. Member is so vehemently emphasizing in this House that farmers are put to lot of harassment. So far, the Government has not received a single complaint.

(INTERRUPTION)

SRI AZEEZ SAIT.—Sir, this is a very important question. Why don't you convert this into 2½ hours discussion? It is a very serious problem.

MR. DEPUTY SPEAKER.—I have no objection.

SRI AZEEZ SAIT.—The Hon. Minister himself has said that he is allowing two bags of paddy to be hulled by the farmers. Sir, a farmer takes the paddy for hulling at a time, minimum 10 to 12 bags and for its transportation definitely he will have to take bullock-cart or tractor. He cannot afford to take only two bags of paddy for hulling. A farmer will consume it within 15 days. The Hon. Minister said that he did not receive a single complaint from the farmers. This is an unjust statement which cannot be accepted.

SRI MANIKRAO PATIL.—At the moment this problem is not existing since we have removed the informal restrictions. As long as the informal restriction was there, ryots were some times facing the difficulty of obtaining the permission and other things. Now,

the farmer can take paddy anywhere in the State. Nobody would question his movement.

(INTERRUPTION)

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ವಾಸ್ತವವಾಗಿ ಹಾಗೆ ಇಲ್ಲ. ಮಂತ್ರಿಗಳು ಸಮಸ್ಯೆಯನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಮಿಲ್ ಪಾಯಿಂಟ್‌ನಲ್ಲಿ ಲೆವಿ ಕಲೆಕ್ಟ್ ಮಾಡುವಂತೆ ರೂಲ್ಸ್ ಮಾಡಿರುವುದು ನಿಜ. ಆದರೆ ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅವರು ರೈತರಿಂದ ಲೆವಿ ವಸೂಲ್ಮಾಡುತ್ತಾರೆ. ಆದ್ದರಿಂದ, ಇದನ್ನು ತಪ್ಪಿಸುವುದಕ್ಕೆ ಏರು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಿಲ್ಲಿನವರು ರೈತರ ಹತ್ತಿರ ಲೆವಿ ಕಲೆಕ್ಟ್ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಲೆವಿ ವಸೂಲ್ಮಾಡುವುದು ಮಿಲ್ಲರ್ ಹತ್ತಿರ.

ಶ್ರೀ ಡಿ. ಟಿ. ರಾವಂ.—ಮಿಲ್ಲಿನವರು ಬೆಳೆಯಂತ್ತಾರೆಯೆ ? ರೈತರು ಬೆಳೆದು ಕೊಡಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಷ್ಟು ಜನ ಹೇಳುತ್ತಿರುವುದು ಅರ್ಥವಾಗುವುದಿಲ್ಲವೆ ?

ಉಪಾಧ್ಯಕ್ಷರು.—ಒಂದು ರಿಕ್ವಿಜಿಷನ್ ಕೊಡಿ. I will put the matter for 2½ hours discussion.

SRI MANIK RAO PATIL.—Tomorrow, the discussion on the demands pertaining to my portfolio would be taken up. At that time, the Hon'ble Members can participate in the budget.

MR. DEPUTY SPEAKER.—You must know the feelings of the hon. Members also.

SRI K. H. HANUME GOWDA.—Sir, this needs a thorough discussion.

ಶ್ರೀ ಎಂ. ಎಸ್. ಆತ್ಮಾನಂದ.—ಹೊಸ ಲೆವಿ ಪದ್ಧತಿ.....

SRI AZEEZ SAIT.—Though we do not want any paddy, paddy is still being consumed by many people therefore we have to support the ryots.

MR. DEPUTY SPEAKER.—Everyone consumes paddy.....

ಶ್ರೀ ಎಂ. ಎಸ್ ಆತ್ಮಾನಂದ.—ಹೊಸ ಲೆವಿ ಪದ್ಧತಿ ಜಾರಿಗೆ ಬಂದ ಮೇಲೆ ರೈತ ಬೆಳೆದ ಭತ್ತದ ಬೆಲೆ ಕುಸಿದಿದೆ. ಬೆಳೆದಂಥ ಭತ್ತಕ್ಕೆ ಸರಿಯಾದ ಮಾರುಕಟ್ಟೆ ಇಲ್ಲ. ಸರಿಯಾದ ಬೆಲೆ ಸಿಗಬೇಕಾದರೆ ಮಿಲ್‌ನವರನ್ನೇ ಅವಲಂಭಿಸಬೇಕಾಗುತ್ತದೆ. ಈ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆ ? ರೈತನಿಗೆ ಉತ್ತಮ ಬೆಲೆ ಸಿಗುವಂತೆ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

SRI MANIK RAO PATIL.—That is why we are effecting purchase of paddy at the support price. If any farmer is not getting proper remuneration by selling paddy in the open market he can deliver it to our points. We have opened some centres for purchase of paddy on the basis of support price.

ಶ್ರೀ ಪಂಪಾಪತಿ.—ರೈತರ ಹತ್ತಿರ ಭತ್ತ ತೆಗೆದುಕೊಳ್ಳುವುದಕ್ಕೆ ನಿಮ್ಮ ಹತ್ತಿರ ಚೀಲಾನೇ ಇಲ್ಲ. ಚೀಲ ಇಲ್ಲದೆ ಹೇಗೆ ತೆಗೆದುಕೊಳ್ಳುತ್ತೀರಿ ? ದುಡ್ಡು ಕೊಡುವುದಿರಲಿ, ಚೀಲ ಬೇಕಲ್ಲ ?

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳಂ ವಿಲೇಜ್ ಆಕೌಂಟೆಂಟ್ ಪ್ರತಿಯೊಬ್ಬ ರೈತನ ಮನೆ ಬಾಗಿಲಿಗೆ ಹೋಗಿ ಪರ್ಮಿಟ್ ಕೊಡುತ್ತಾನೆ ಎಂದು ಹೇಳಿದರು. ೨೫ ಸಾವಿರ ಹಳ್ಳಿಗಳಲ್ಲಿ ಯಾವುದಾದರೂ ಒಂದು ಕಡೆ ಆ ರೀತಿ ಮನೆ ಬಾಗಿಲಿಗೆ ಹೋಗಿ ಪರ್ಮಿಟ್ ಕೊಟ್ಟಿರುವುದು ತೋರಿಸುತ್ತೀರಾ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಯಾವ ಆಕೌಂಟೆಂಟೂ ಹೋಗಿಲ್ಲ ಎಂದು ದೂರು ನಮಗೆ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಮುಂದಿನ ಬಾಗಿಲಿಗೆ ಹೋಗಿಲ್ಲ, ಹಿಂದಿನ ಬಾಗಿಲಿಗೆ ಹೋಗಿದ್ದಾರೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಆ ಬಗ್ಗೆ ದೂರುಗಳು ಬಂದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಸತ್ಯಕ್ಕೆ ದೂರವಾದುದು, ನಾನೇ ಮೂರು ತಿಂಗಳ ಹಿಂದೆ ವಿಲೇಜ್ ಆಕೌಂಟೆಂಟ್ ಹುದ್ದೆಯಿದರೂ ಸಿಗುವುದಿಲ್ಲ, ಪರ್ಮಿಟ್ ಬರಲಿಲ್ಲ ಎಂದು ಅರ್ಜಿ ಕೊಟ್ಟಿದ್ದೆ. ಆದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ. ಮಂತ್ರಿಗಳು ಅದನ್ನು ಮರೆತಿದ್ದಾರೆಂದು ಕಾಣುತ್ತದೆ. ಅರ್ಜಿ ಕೊಟ್ಟು ಮೂರು ತಿಂಗಳಾದರೂ ವಿಲೇಜ್ ಆಕೌಂಟೆಂಟ್ ಬರಲಿಲ್ಲ ಎಂದು ಕೊನೆಗೆ ಮಿಲ್‌ನವರ ಹತ್ತಿರ ಏನೋ ಮಾಡಿ ಅಕ್ಕಿ ಮಾಡಿಸಿ ಬೆಂಗಳೂರಿಗೆ ತಂದೆವು. ಈ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಗಳು ಮೂರು ಲಕ್ಷ ಟನ್ ಲೆವಿ ವಸೂಲು ಮಾಡುವ ಟಾರ್ಜೆಟ್ ಹಾಕಿಕೊಂಡಿದ್ದು ಅದನ್ನು ಪೂರ್ತಿ ಮಾಡಿದ್ದೇವೆ ಎಂದು ಹೇಳಿದರು. ಬಹುತೇಕ ಸದಸ್ಯರು ಲೆವಿ ಪದ್ಧತಿಯಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳುತ್ತಿರುವುದಲ್ಲದೆ ಟಾರ್ಜೆಟ್ ಮಾಡಿರುವುದರಿಂದ ಲೆವಿ ಪದ್ಧತಿ ನಿಲ್ಲಿಸುವ ಬಗ್ಗೆ ಏತಕ್ಕೆ ಪರಿಶೀಲನೆ ಮಾಡಬಾರದು ?

SRI MANIK RAO PATIL.—Sir, procurement of levy is a national policy and as such Government of Karnataka cannot take a unilateral decision. Suppose, if we bid go-bye to this system then it will have an indirect effect. We are depending on the Government of India in respect of verious essential commodities. If we do not follow the policy of the Government of India we may have to face hardships. I don't think there is any logic in the demand of the hon'ble member that we should bid go-bye to this system.

ಶ್ರೀ ಎಸ್. ಆರ್. ಬೊಮ್ಮಾಯಿ.—ತಪ್ಪು ಇಲಾಖೆ ಬೇಡಿಕೆಗೆ ಉತ್ತರ ಕೊಡುವಾಗ ವಿವರವಾದ ಉತ್ತರವನ್ನು ಕೊಡಿ. ಲೆವಿ ಪದ್ಧತಿಯನ್ನು ಬಿಡಬೇಕೆಂದು ನಾನು ಹೇಳುವುದಿಲ್ಲ. ಮಿಲ್ ಲೆವಿಗಿಂತ ರೈತನಿಂದ ಲೆವಿ ತೆಗೆದುಕೊಳ್ಳುವುದು ಒಳ್ಳೆಯದು. ಇದರಿಂದ ರೈತರಿಗೂ ಲಾಭವಾಗುತ್ತದೆ, ಸರ್ಕಾರಕ್ಕೂ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ನನ್ನದು. ಬೇಡಿಕೆ ಬಗ್ಗೆ ಚರ್ಚೆ ಬಂದಾಗ ನಾನು ಈ ಬಗ್ಗೆ ವಿವರವಾಗಿ ಹೇಳುತ್ತೇನೆ. ಆದರೆ ಅದಕ್ಕೆ ಮೊದಲು ಇದರ ಬಗ್ಗೆ ಪುನರಾಲೋಚನೆ ಮಾಡಿ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಈಗ ತಾನೇ ಅದನ್ನು ಹೇಳಿದೆ. ಹೋದ ವರ್ಷ ನಾವು ರೈತರಿಂದ ಲೆವಿ ಕಲೆಕ್ಟ್ ಮಾಡಿದ್ದೆವು. ಈ ವರ್ಷ ಆ ವಿಷಯದಲ್ಲಿ ಕೇಂದ್ರ ಸರ್ಕಾರದಿಂದ ಡೈರೆಕ್ಷನ್ ಬಂದಿದೆ. ಆಸ್ಸಾಂ, ಆಂಧ್ರಪ್ರದೇಶ್, ಹರಿಯಾಣ, ಪಂಜಾಬ್ ಮುಂತಾದ ಕಡೆಗಳಲ್ಲಿ ಮಿಲ್ ಪಾಯಿಂಟ್ ಲೆವಿ ಜಾರಿಯಲ್ಲಿದೆ. ಅದೇ ರೀತಿ ಕರ್ನಾಟಕ ಸರ್ಕಾರ ರೈತರಿಂದ ಲೆವಿ ವಸೂಲು ಮಾಡುವ ಪದ್ಧತಿ ಇದ್ದರೂ ಕೂಡ in addition to that levy we have to adopt the policy of collecting levy from millers and traders also. ಈಗ ನಾವು ಎರಡೂ ಲೆವಿ ಸಿಸ್ಟಂ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ರೈತರ ಹತ್ತಿರ ಕೂಡ ಲೆವಿ ವಸೂಲು ಮಾಡ ಬೇಕಾಗುತ್ತದೆ. Already our Goverament has committed that we should solve the hardships faced by the farmers.

ಶ್ರೀ ಆನಂದ ಕುಂದ ಹೆಗ್ಗಡೆ — ಕರಾವಳಿ ಜಿಲ್ಲೆಗಳಲ್ಲಿ ನಾವು ಬೇಯಿಸಿ ಅಕ್ಕಿ ಮಾಡುತ್ತೇವೆ. ಭತ್ತವನ್ನು ಸೀದಾ ಮಿಲ್‌ಗೆ ಕೊಡುವುದಿಲ್ಲ. ಬೇಯಿಸುವ ಪಾತ್ರೆಗೆ ೧೦ ಕ್ವಿಂಟಾಲ್ ಭತ್ತ ಬೇಕಾಗುತ್ತದೆ. ನೀವು ಎರಡು ಕ್ವಿಂಟಾಲ್ ಎಂದರೆ ಐದಾರು ಮೈಲಿ ಮಿಲ್‌ಗೆ ಎರಡು ಕ್ವಿಂಟಾಲ್ ಭತ್ತವನ್ನು ಎಷ್ಟು ಸಾರಿ ತೆಗೆದುಕೊಂಡು ಹೋಗುವುದಕ್ಕಾಗುತ್ತದೆ ? ರೈತನ ಸಮಸ್ಯೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಈ ಕಾಯಿದೆಯನ್ನು ಭತ್ತ ಬೆಳೆಯುವ ತಿನ್ನುವ ಪರಿಚಯ ಇಲ್ಲದವರು ಮಾಡಿದ್ದಾರೆಂದು ನಾನು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.— ನಾವು ಕಡ್ಡಾಯವಾಗಿ ಮಿಲ್ಲರ್ಸ್‌ನಿಂದಲೇ ಲೆವಿ ವಸೂಲಿ ಮಾಡಬೇಕಾದರೆ ಏನಾದರೂ ಕೆಲವು ರಿಸ್ಟ್ರಿಕ್ಷನ್ಸ್ ಹಾಕಲೇಬೇಕಾಗುತ್ತದೆ. ಆದ್ದರಿಂದ ಎರಡು ಕ್ವಿಂಟಾಲ್ ಫ್ರೀಯಾಗಿ ರೈತರು ಎಲ್ಲಾದರೂ ಒಯ್ಯಬಹುದು ಎಂದು ಆಜ್ಞೆ ಹೊರಡಿಸಿದ್ದೇವೆ. ೯ ಕ್ವಿಂಟಾಲ್ ೧೦ ಕ್ವಿಂಟಾಲ್ ಬೇಕಾದರೆ ಆಲ್ಲಿನ ವಿಲೇಜ್ ಆಕೌಂಟೆಂಟ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ನಾವುರಿಸ್ಟ್ರಿಕ್ಷನ್ ತೆಗೆದರೆ ನಮಗೆ ಲೆವಿ ಭತ್ತ ಸಿಗುವುದೇ ಇಲ್ಲ. ಅನೇಕ ಮಿಲ್ ಮಾಲೀಕರು ಯಾವುದೇ ಭತ್ತ ಬಂದರೂ ರೈತರ ಭತ್ತ ಎಂದು ಲೆವಿ ಕೊಡದಂತೆ ತಪ್ಪಿಸಿಕೊಳ್ಳುವ ಪರಿಸ್ಥಿತಿ ಇದೆ. ಈ ತರಹ ಎಲ್ಲಾ ತಾಂತ್ರಿಕ ಅಡಚಣೆಗಳು ಬರುತ್ತವೆ. ಈಗಿನ ಪದ್ಧತಿಯಿಂದ ಕೆಲವು ತೊಂದರೆಗಳಾಗಬಹುದು. ಆಗುವುದಿಲ್ಲ ಎಂದು ಹೇಳುವುದಿಲ್ಲ. We will do our best to solve the difficulties of the farmers.

ಶ್ರೀ ಜೆ. ಡಿ. ಸೋಮಪ್ಪ.— ಸನ್ಮಾನ್ಯ ಅಧ್ಯಕ್ಷರೆ, ಮಿಲ್ ಪಾಯಿಂಟ್‌ನಿಂದ ಲೆವಿ ವಸೂಲು ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮಿಲ್‌ನವರೇನೂ ಭತ್ತ ಬೆಳೆಯುವುದಿಲ್ಲ. ಅದನ್ನು ಬೆಳೆಯುವವರು ರೈತರು, ರೈತರ ಹತ್ತಿರದಿಂದಲೇ ಸುಲಿಗೆ ಮಾಡಿ ಮಿಲ್‌ನವರು ಸರ್ಕಾರಕ್ಕೆ ಕೊಡಬೇಕು. ವಿಲೇಜ್ ಆಕೌಂಟೆಂಟ್ ಮನೆ ಬಾಗಿಲಿಗೆ ಬಂದು ಪರ್ಮಿಟ್ ಕೊಡುತ್ತಿದ್ದಾನೆಂದು ಹೇಳುತ್ತಿದ್ದಾರೆ. ವಿಲೇಜ್ ಆಕೌಂಟೆಂಟ್ ವಿಲೇಜ್ ಹೆಡ್‌ಮಾಸ್ಟರ್ ಆಗಿದ್ದಾನೆ. ಪರ್ಮಿಟ್‌ಗೆ ಹೋದಾಗ ಅವನು ನಿನಗೇತಕ್ಕೆ ಇಷ್ಟು ಎಂದು ಕೇಳುತ್ತಾನೆ, ವಿಲೇಜ್ ಆಕೌಂಟೆಂಟ್ ಮನೆ ಬಾಗಿಲಿಗೆ ಹೋಗಿ ಎಲ್ಲೆಲ್ಲಿ ಪರ್ಮಿಟ್ ಕೊಟ್ಟಿದ್ದಾನೆ ? ಆ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿದೆಯೇ ? ಮಾನ್ಯ ಮಂತ್ರಿಗಳ ಹತ್ತಿರ ಲೆಕ್ಕ ಇದೆಯೆ ?

SRI MANIK RAO PATIL.— Sir, we have issued instructions already to the Deputy Commissioners to the effect that farmers should not suffer on this account. If the hon. member feels that the entire Government order itself is not in existence I can't help it. It may be his imagination.

ಶ್ರೀ ಎಸ್. ಆರ್. ಬೊಮ್ಮಾಯಿ.— ವಿಧಾನಸಭೆಯಲ್ಲಿ ಇದನ್ನು ಮಾತನಾಡುವುದಕ್ಕಿಂತ ಈ ಬಗ್ಗೆ ಒಂದು ಸಭೆ ಕರೆದರೆ ಒಳ್ಳೆಯದು. ಮಾನ್ಯ ಮಂತ್ರಿಗಳ ಛೇಂಬರ್‌ನಲ್ಲಿ ಶಾಸಕರ ಸಭೆ ಕರೆದರೆ ಕೆಲವು ವಿಚಾರಗಳನ್ನು ಅಲ್ಲಿ ಹೇಳಬಹುದು. ಆದ್ದರಿಂದ ಈ ನನ್ನ ಸಲಹೆಯನ್ನು ಆಲೋಚನೆ ಮಾಡಿ.

SRI MANIK RAO PATIL.— Sir, it is a very good suggestion. Before announcing the new levy policy I will hold a meeting and I will invite all the Opposition party leaders and also some members of the ruling party who are interested in the welfare of the farmers. In the meeting we can discuss this subject threadbare. The hon. members can give their valuable suggestions keeping in view the policy of the Government of India. If they give any good suggestions we will not hesitate to implement them.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಈಗ ಎರಡು ಕ್ವಿಂಟಾಲ್ ಅನ್ನು ಫ್ರೀಯಾಗಿ ರೈತ ತೆಗೆದುಕೊಂಡುಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದನ್ನು ೫ ಕ್ವಿಂಟಾಲ್‌ಗೆ ಹೆಚ್ಚು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

SRI MANIK RAO PATIL.— All right, Sir. We will issue instructions that there will be no restriction upto five quintals

೧೦-೦೦ ಪ.ಪಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಸಭೆ ಕರೆಯುತ್ತೇವೆಂದು ಹೇಳಿದ್ದಾರೆ. ನನ್ನ ಪ್ರಶ್ನೆಯು ಆಗತ್ಯ ಇಲ್ಲ. ಆದರೂ ಕೂಡ ಒಂದು ಮಾತನ್ನು ಸಲಹೆ ರೂಪದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದವರು ಲೆವಿ ನೀತಿಯಮ್ಮ ಹಾಕಿದ್ದಾರೆ ನಿಜ. ಆದರೆ ಅದರ ಮೇಲೆ ಮಾರ್ಪಾಡು ಮಾಡಬಾರದು ಸ್ವತಃ ಯೋಚನೆ ಮಾಡಬಾರದು ಎಂದಂ ಕೇಂದ್ರ ಸರ್ಕಾರದ ಆಜ್ಞೆಯಲ್ಲಿರುವುದಿಲ್ಲ. ಇಹು ಜನರ ಅಭಿಪ್ರಾಯದಂತೆ ಇವತ್ತು ಮಿಲ್ ಪಾಯಿಂಟ್ ಲೆವಿ ಪದ್ಧತಿಯಲ್ಲಿ ಹುಳುಕುಗಳು, ಅವಗುಣಗಳು ಜಾಸ್ತಿಯಿವೆ. ಅನೇಕ ರೀತಿಯ ತೊಂದರೆಗಳು ಆಗುತ್ತಿವೆ. ಇದರಿಂದ ರೈತರಿಗೆ ಯಾವರೀತಿಯ ಪ್ರಯೋಜನವಾಗುವುದಿಲ್ಲ ಎನ್ನುವ ಅಭಿಪ್ರಾಯಗಳು ಇವೆ. ನಾವು ನಿಮ್ಮ ಲೆವಿ ನೀತಿಯನ್ನು ಕೈಬಿಡಿ ಎಂದು ಹೇಳುತ್ತಿಲ್ಲ. ಈಗ ಮಾಡಿರತಕ್ಕ ಕಾನೂನಿಂದ ಆಗಿರತಕ್ಕ ತೊಂದರೆಯನ್ನು ನಾಳೆ ಕರೆಯುವ ಸಭೆಯಲ್ಲಿ ನಿವಾರಣೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಮಾಣಿಕರಾವ್ ಪಾಟೀಲ್.—ಆದರ ಬಗ್ಗೆ ವಿಚಾರ ಮಾಡೋಣ.

Afforestation Scheme in Sindgi Taluk

493. M.H. BEKINALKAR (Sindgi).—Will the Minister for Forest, Mines and Geology be pleased to state.—

(a) The total extent of area in Sindgi Taluk taken up for afforestation ;

(b) The number of plants planted during the year 1981-82.

SRI G. MADE GOWDA (Minister for Forest, Mines and Geology).—

(a) The afforestation work taken up in the Sindgi Taluk is as detailed below.—

Year	Area in Hectares
1979-80	183 Hect.
1980-81	100 Hect.
1981-82	234 Hect.

(b) The number of plants planted during the year 1981-82 is 3,09,000 plants.

ಶ್ರೀ ಎಂ.ಹೆಚ್. ಬೆಕ್ಕಿನಾಳ್ಕರ್.—೧೯೮೧-೮೨ನೇ ಸಾಲಿನಲ್ಲಿ ಮೂರು ಲಕ್ಷದ ಒಂಭತ್ತು ಸಾವಿರ ಸಸಿಗಳನ್ನು ಹಾಕಿಸಿದ್ದೇವೆಂದು ತಿಳಿಸಿದ್ದೀರಿ. ಬರೀ ನೀಲಗಿರಿ ಸಸಿಗಳನ್ನು ಹಾಕಿಸಿದ್ದಿರೋ? ಬೇರೆ ಜಾತಿಯ ಗಿಡಗಳನ್ನು ಹಾಕಿಸಿದ್ದೀರೋ?

ಶ್ರೀ ಜಿ. ಮಾದೇಗೌಡ.—ಡ್ರೈ ಏರಿಯಾದಲ್ಲಿ ಇದುವರೆಗೆ ನಾವು ನೀಲಗಿರಿ ಗಿಡಗಳನ್ನು ಬೆಳೆಸುವಂಥ ಪದ್ಧತಿಯನ್ನು ಇಟ್ಟುಕೊಂಡಿದ್ದೆವು. ಕಳೆದ ಸಾಲಿನಿಂದ ಮಿಶ್ರ ಜಾತಿಯ ಗಿಡಗಳನ್ನು ಬೆಳೆಸುತ್ತಿದ್ದೇವೆ. ರೈತರಿಗೆ ಪುಕ್ಕಟೆಯಾಗಿಯೂ ಗಿಡಗಳನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಹೆಚ್. ಬೆಕ್ಕಿನಾಳ್ಕರ್.—ಸಿಂದಗಿ ಮತ್ತು ಇಂಡಿ ತಾಲ್ಲೂಕುಗಳು ಇಡೀ ರಾಜ್ಯದಲ್ಲಿಯೆ ಬರಗಾಲಕ್ಕೆ ಪ್ರಸಿದ್ಧವಾದ ತಾಲ್ಲೂಕುಗಳು. ಈ ತಾಲ್ಲೂಕುಗಳಲ್ಲಿ ಹೆಚ್ಚಿನ ಗಿಡಗಳನ್ನು ಬೆಳೆಸುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನೇನಾದರೂ ತಯಾರು ಮಾಡಲಾಗಿದೆಯೇ?